Food . Farmers . Freedom
Alliance for Sustainable & Holistic Agriculture

ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ (ಆಶಾ)

ಹವಾಮಾನ ಬದಲಾವಣೆ ಬಿಕ್ಕಟ್ಟಿನ ಸಂದರ್ಭದಲ್ಲಿ
ಆಹಾರ ಸಾರ್ವಭೌಮತ್ವ ಪೋಷಕಾಂಶ ಭದ್ರತೆ, ಸುಸ್ಥಿರ ಪರಿಸರ
ಮತ್ತು ರೈತರ ಸಶಕ್ತೀಕರಣ

ಕಿಸಾನ್ ಸ್ವರಾಜ್ ಸಮ್ಮೇಳನ 2022

ಕೃಷಿಕರು ಹಾಗೂ ಕೃಷಿ ಸಮುದಾಯದ ಹಿತೈಶಿಗಳ ಮಹಾಸಂಗಮ

11, 12 ಹಾಗೂ 13 ನವೆಂಬರ್, 2022
(ಶುಕ್ರವಾರ, ಶನಿವಾರ ಮತ್ತು ಭಾನುವಾರ)
ಸ್ಥಳ: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, ಕರ್ನಾಟಕ

ನೋಂದಾಯಿಸಲು ಆಹ್ವಾನ!

ಸಹಯೋಗ:

ಸಹಜ ಸಮೃದ್ಧ, ಜನಪದ ಸೇವಾ ಟ್ರಸ್ಟ್, ಜೆಎಸ್ಎಸ್ ಕೃಷಿ ವಿಜ್ಞಾನ ಕೇಂದ್ರ,
ಬೆಳುವಲ ಪ್ರತಿಷ್ಠಾನ, ಸಾಯಿಲ್, ಸಹಜ ಸೀಡ್ಸ್ ಮತ್ತು ಅಲ್ಲಮ ಟ್ರಸ್ಟ್

ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ (ಅಲಯನ್ಸ್ ಫಾರ್ ಸಸ್ಟೆನಬಲ್ ಅಂಡ್ ಹೊಲಿಸ್ಟಿಕ್ ಅಗ್ರಿಕಲ್ಚರ್– 'ಆಶಾ') ಅಥವಾ ಆಶಾ– ಕಿಸಾನ್ ಸ್ವರಾಜ್ ಮೈತ್ರಿಕೂಟವು 5ನೇ 'ಕಿಸಾನ್ ಸ್ವರಾಜ್ ಸಮ್ಮೇಳನ'ವನ್ನು ಮೈಸೂರಿನಲ್ಲಿ 2022ರ ನವೆಂಬರ್ 11, 12 ಮತ್ತು 13ರಂದು ನಡೆಸಲು ನಿರ್ಧರಿಸಿದೆ.

ಕಿಸಾನ್ ಸ್ವರಾಜ್ ಸಮ್ಮೇಳನದ ಕುರಿತು

ಸಮಾಜದಲ್ಲಿನ ಸಂಕೀರ್ಣ ಸವಾಲುಗಳನ್ನು ಸಂಘಟಿತರಾಗಿ ಎದುರಿಸಲು ಹಾಗೂ ಪ್ರತ್ಯೇಕವಾಗಿ ಹಲವು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೂ ಒಂದೆಡೆ ಸೇರಿ ಪರಸ್ಪರ ಅನುಭವ– ಕಲಿಕೆ ವಿನಿಮಯ ಮಾಡಿಕೊಳ್ಳುವ ಉದ್ದೇಶದಿಂದ ಸುಸ್ಥಿರ ಹಾಗೂ ಸಮಗ್ರ ಕೃಷಿ ಮೈತ್ರಿಕೂಟ ('ಆಶಾ') ಕಾಲಕಾಲಕ್ಕೆ 'ಕಿಸಾನ್ ಸ್ವರಾಜ್ ಸಮ್ಮೇಳನ'ಗಳನ್ನು ಆಯೋಜಿಸುತ್ತ ಬಂದಿದೆ. ಹೊಸದಾಗಿ ಆಂದೋಲನಕ್ಕೆ ಸೇರಿಕೊಳ್ಳುವ ಜನರು, ಅವರ ಆಲೋಚನೆ, ಚಿಂತನೆ, ವಿಶ್ಲೇಷಣೆ, ಚೈತನ್ಯ ಹಾಗೂ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದು ಕೃಷಿ ಸಮುದಾಯದ ಜೀವನೋಪಾಯವನ್ನು ಸುಧಾರಿಸಲು ಈ ಸಮ್ಮೇಳನಗಳು ನೆರವಾಗುತ್ತಿವೆ.
ಈ ಹಿಂದೆ ಭೋಪಾಲ್ (2013), ಹೈದರಾಬಾದ್ (2016) ಮತ್ತು ಅಹಮದಾಬಾದಿನಲ್ಲಿ (2018)ಕಿಸಾನ್ ಸ್ವರಾಜ್ ಸಮ್ಮೇಳನ ಆಯೋಜಿಸಲಾಗಿತ್ತು. ಎರಡು ವರ್ಷಕ್ಕೊಮ್ಮೆ ಭಾರತೀಯ ಸಾವಯವ ಕೃಷಿಕರ ಒಕ್ಕೂಟ (ಒಫಾಯ್) ನಡೆಸುವ ಸಾವಯವ ಕೃಷಿ ಸಮಾವೇಶದ ಜತೆಯಲ್ಲೇ, 'ಆಶಾ' ವತಿಯಿಂದ 'ಸಾವಯವ ಕೃಷಿಕರ ಸಮಾವೇಶ'ವನ್ನು ಚಂಡೀಗಢದಲ್ಲಿ (2015) ಆಯೋಜಿಸಲಾಗಿತ್ತು.

ಕೃಷಿ ಆದಾಯ, ಬೆಂಬಲ ಬೆಲೆ, ಪರಿಸರಸ್ನೇಹಿ ಬೇಸಾಯ ವಿಧಾನ, ಸಿರಿಧಾನ್ಯಕ್ಕೆ ಉತ್ತೇಜನ, ಮೂಲತಳಿ ಸಂರಕ್ಷಣೆ ಸೇರಿದಂತೆ ಸರ್ಕಾರದ ವಿವಿಧ ನೀತಿಗಳನ್ನು ಚರ್ಚೆಗೆ ತರುವ 'ಆಶಾ' ಪ್ರಯತ್ನಕ್ಕೆ ಪೂರಕವಾಗಿ 5ನೇ 'ಕಿಸಾನ್ ಸ್ವರಾಜ್ ಸಮ್ಮೇಳನ' ನಡೆಯಲಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿವಿಧ ಹೆಸರುಗಳಿಂದ ಅಳವಡಿಸಿಕೊಂಡಿರುವ ಪರಿಸರಸ್ನೇಹಿ ಕೃಷಿ ಬಗ್ಗೆಯೂ 'ಆಶಾ' ಪ್ರಸ್ತಾಪಿಸಲಿದೆ.



ಇನ್ನೊಂದೆಡೆ, ಹಲವು ಸವಾಲುಗಳು ಈಗಲೂ ಹಾಗೆಯೇ ಉಳಿದುಕೊಂಡಿವೆ. ಹವಾಮಾನ ಬದಲಾವಣೆಯು ಇದೀಗ ಬಹುದೊಡ್ಡ ಬಿಕ್ಕಟ್ಟನ್ನು ಸೃಷ್ಟಿಸಿದ್ದು, ಎಂದಿಗಿಂತಲೂ ಈಗ ಅದು ರೈತರಿಗೆ ಹೆಚ್ಚು ಬಾಧಿಸತೊಡಗಿದೆ. ಕೃಷಿ ಕ್ಷೇತ್ರದಲ್ಲಿನ ಬದಲಾವಣೆಯು ರೈತ ಸಮುದಾಯಕ್ಕೆ ಹಲವು ಬಗೆಯ ಅಡ್ಡಿ ಆತಂಕಗಳನ್ನು ತಂದೊಡ್ಡಿದೆ. ಭೂಮಿ, ಬೀಜ ಮತ್ತು ಸರ್ಕಾರಗಳ ನೆರವನ್ನು ಕಸಿದುಕೊಂಡು ಸಣ್ಣ ರೈತರನ್ನು ವ್ಯವಸಾಯ ಕ್ಷೇತ್ರದಿಂದ ದೂರ ಮಾಡಿ, ಕಾರ್ಪೊರೇಟ್ ನಿಯಂತ್ರಿತ, ರಾಸಾಯನಿಕ, ಯಾಂತ್ರೀಕೃತ, ಡಿಜಿಟಲೀಕೃತಗೊಳಿಸಲಾದ ಕೃಷಿಯು ಹೊಸ ಸವಾಲುಗಳನ್ನು ಹಾಕಿದೆ. ಇನ್ನು, ಮುಕ್ತ ವಾಣಿಜ್ಯ ಒಪ್ಪಂದಗಳು ಕೃಷಿ ಆರ್ಥಿಕತೆ ಮೇಲೆ ನೇರ ದಾಳಿ ಮಾಡುತ್ತಿವೆ. ಬೀಜದಂಥ ಜೈವಿಕ ಸಂಪತ್ತಿನ ಹಕ್ಕುಗಳನ್ನು ರೈತರ ಕೈಯಿಂದ ಕಸಿದುಕೊಳ್ಳುವ ಬೆದರಿಕೆ ಹೆಚ್ಚುತ್ತಿವೆ. ಗುಜರಾತಿನಲ್ಲಿ ಕೆಲವು ಆಲೂಗಡ್ಡೆ ರೈತರ ಮೇಲೆ ಬಹುರಾಷ್ಟ್ರೀಯ ಕಂಪನಿ ಪೆಪ್ಸಿಕೋ ನಡೆಸಿದ ಕಾನೂನು ಉಲ್ಲಂಘನೆ ಪ್ರಕರಣವೇ ಇದಕ್ಕೆ ಸಾಕ್ಷಿ. ಆಹಾರ ಪದ್ಧತಿಗಳು ಹಲವು ಕಾರಣಗಳಿಂದಾಗಿ ಬಾಧಿತಗೊಂಡಿದ್ದು, ಇದರಿಂದಾಗಿಯೇ ಮಾನವ ಸಮುದಾಯವನ್ನು ಕಾಯಿಲೆಗಳು ಕಾಡತೊಡಗಿವೆ. ಒಂದೆಡೆ ಕುಲಾಂತರಿ ತಳಿಗಳು ವಕ್ಕರಿಸತೊಡಗಿವೆ; ಇನ್ನೊಂದೆಡೆ ವಿಷಕಾರಿ ರಾಸಾಯನಿಕಗಳು ಜನರ ಜೀವ ತೆಗೆಯುತ್ತಿವೆ. ಈ ಹಲವು ತೀವ್ರ ತೆರನಾದ ಸಮಸ್ಯೆಗಳ ಬಗ್ಗೆ 'ಆಶಾ' ಕಿಸಾನ್ ಸ್ವರಾಜ್ ಸಮ್ಮೇಳನ ಚಿಂತನ ಮಂಥನ ನಡೆಸಲಿದೆ. ಕೃಷಿ ವಲಯವು ಇಂಥ ಬಿಕ್ಕಟ್ಟುಗಳ ಮಧ್ಯೆ ಮೈಸೂರಿನಲ್ಲಿ 5ನೇ ಕಿಸಾನ್ ಸ್ವರಾಜ್ ಸಮ್ಮೇಳನವು ಆಯೋಜನೆಗೊಂಡಿದೆ. ಎಲ್ಲರನ್ನೂ ಒಳಗೊಳ್ಳುವ ವಿಶಾಲ ಮನೋಭಾವ ಅಳವಡಿಸಿಕೊಂಡಿರುವ 'ಕಿಸಾನ್ ಸ್ವರಾಜ್ ಸಮ್ಮೇಳನ'ವು ಕೇವಲ ರಾಷ್ಟ್ರೀಯ ಮಟ್ಟದ ಸಮಾವೇಶ ಆಗಿರದೇ ಪರಸ್ಪರ ಕಲಿಕೆ, ಜ್ಞಾನವಿನಿಮಯ, ಸಾಮೂಹಿಕ ಯೋಜನೆಯ ಪರಿಕಲ್ಪನೆಯನ್ನು ಅನುಸರಿಸಲಿದೆ. 'ಆಶಾ'ದಲ್ಲಿರುವ ಸಂಘಟನೆಗಳು ಮತ್ತು ಅವು ನಡೆಸುತ್ತಿರುವ ಜನಾಂದೋಲನಗಳನ್ನು ಈ ಸಮ್ಮೇಳನವು ಬೆಂಬಲಿಸಲಿದೆ.



ಸ್ವರೂಪ

ಸಮ್ಮೇಳನದ ಸ್ವರೂಪ ವಿಭಿನ್ನವಾಗಿರಲಿದೆ. ಮುಖ್ಯ ವೇದಿಕೆ ಮಾತ್ರವಲ್ಲದೇ ಸಮಾನಾಂತರ ವೇದಿಕೆಗಳಲ್ಲಿ ಸಮಾವೇಶ, ವಿಚಾರ ಮಂಡನೆ ನಡೆಯಲಿವೆ. ಇದರ ಜತೆಗೆ, ಬೀಜ, ಆಹಾರ, ಜೀವ ವೈವಿಧ್ಯ, ಸಾವಯವ ಉತ್ಪನ್ನಗಳ ಪ್ರದರ್ಶನ ಮತ್ತು ಮೇಳ, ನಿರ್ದಿಷ್ಟ ವಿಷಯಗಳ ಕುರಿತು ಪ್ರಾತ್ಯಕ್ಷಿಕೆ ತಾಕುಗಳು, ಉಪನ್ಯಾಸಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಾಡಾಗಲಿವೆ. ಸಮಾನಾಂತರ ವೇದಿಕೆಗಳಲ್ಲಿ ನಡೆಯುವ ಕಾರ್ಯಕ್ರಮಗಳು ಸಮ್ಮೇಳನದ ಮುಖ್ಯ ಭಾಗವಾಗಿದ್ದು, ಇಲ್ಲಿ ಸಂವಾದ ಮತ್ತು ಪರಸ್ಪರ ಜ್ಞಾನ ವಿನಿಮಯಕ್ಕೆ ಆದ್ಯತೆ ನೀಡಲಾಗುತ್ತದೆ. ಅನೌಪಚಾರಿಕ ಸಂವಾದಕ್ಕೆ ಸಹ ಅವಕಾಶ ಕಲ್ಪಿಸಲಾಗಿದೆ. ಸಮಾನಮನಸ್ಕ ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳನ್ನು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಲಾಗಿದೆ. ವಿಜ್ಞಾನಿಗಳು ಮತ್ತು ನೀತಿ ನಿರೂಪಕರ ಜತೆಗೆ ವಿಚಾರ ವಿನಿಮಯವೂ ಆಯೋಜಿತವಾಗಿದೆ.

ಮೂರು ದಿನಗಳ ಸಮ್ಮೇಳನದ ನಂತರ, ಒಂದು ಹಾಗೂ ಎರಡು ದಿನಗಳ ಕೃಷಿ ಪ್ರವಾಸದ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ ನಿಗದಿತ ವೆಚ್ಚವನ್ನು ಪಾವತಿಸಿ, ಮೈಸೂರು ಸಮೀಪದ ಸಾವಯವ, ನೈಸರ್ಗಿಕ ಕೃಷಿಕರ ತೋಟಗಳಿಗೆ ಭೇಟಿ ನೀಡಬಹುದು. ಈ ಕುರಿತು ಸಮ್ಮೇಳನದ ಬಳಿಕ ಕ್ಷೇತ್ರ ಭೇಟಿ ವಿವರಗಳನ್ನು ನೋಡಿ.

ನೋಂದಣಿ ಪ್ರಕ್ರಿಯೆ

ಸಮ್ಮೇಳನದಲ್ಲಿ ಆಯೋಜನೆಯಾಗುವ ಬಹುತೇಕ ಕಾರ್ಯಕ್ರಮಗಳಿಗೆ ('ಸಾರ್ವಜನಿಕ ಕಾರ್ಯಕ್ರಮ' ಎಂದು ಪರಿಗಣಿಸಿದ್ದನ್ನು ಹೊರತುಪಡಿಸಿ) ಮೊದಲೇ ನೋಂದಾಯಿಸುವುದು ಕಡ್ಡಾಯ. ಈ ಕುರಿತ ವಿವರಗಳು ಇಲ್ಲಿವೆ:
ನೋಂದಣಿಗೆ ಕೊನೆಯ ದಿನಾಂಕ: 30ನೇ ಸೆಪ್ಟೆಂಬರ್ 2022

ಎಲ್ಲ ವಿಧದ ನೋಂದಣಿ ಮತ್ತು ಶುಲ್ಕ ಪಾವತಿಗೆ ಲಿಂಕ್ ಇಲ್ಲಿದೆ:

Group Registrations-
Registration- https://tinyurl.com/KSSGroupRegistrations
Payment- https://rzp.io/l/kisanswarajsammelan

ಗರಿಷ್ಠ 11 ಜನರು ಇರಬಹುದಾದ ಗುಂಪು ನೋಂದಣಿಗೆ ಪ್ರತ್ಯೇಕ ನೋಂದಣಿ ಅರ್ಜಿಯಲ್ಲಿ ವಿವರ ನೋಂದಾಯಿಸಿ ದಾಖಲಿಸಬೇಕು ಹಾಗೂ ಹಣಪಾವತಿ ಲಿಂಕ್ ಮೂಲಕ ಶುಲ್ಕ ಪಾವತಿಸಬೇಕು.

ದಯವಿಟ್ಟು ಗಮನಿಸಿ: ಕೊನೆಯ ದಿನಾಂಕದ– 30ನೇ ಸೆಪ್ಟೆಂಬರ್– ಗಡುವಿನೊಳಗೆ ಗರಿಷ್ಠ ನೋಂದಣಿ ಸಂಖ್ಯೆಯನ್ನು ತಲುಪಿದರೆ, ನೋಂದಣಿ ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವ ಹಕ್ಕು ಸಂಘಟಕರಿಗೆ ಇದೆ. ಹಾಗಿದ್ದರೂ ಹೆಚ್ಚೆಚ್ಚು ಸಂಖ್ಯೆಯ ಆಸಕ್ತರು ಸಮ್ಮೇಳನದಲ್ಲಿ ಪಾಲ್ಗೊಳ್ಳುವಂತೆ ಮಾಡಲು 'ಆಶಾ' ತನ್ನ ಶಕ್ತಿ ಮೀರಿ ಪ್ರಯತ್ನ ನಡೆಸಲಿದೆ.

ಪೂರ್ಣವಾಗಿ ಭರ್ತಿ ಮಾಡಿದ ಅರ್ಜಿ ಜತೆಗೆ ನಿಗದಿತ ಶುಲ್ಕವನ್ನು ಸಂದಾಯ ಮಾಡಿದ ಬಳಿಕವೇ ನೋಂದಣಿ ಅಧಿಕೃತವಾಗಲಿದೆ.

ನೋಂದಣಿ ಶುಲ್ಕ

ಸರ್ಕಾರದ ಧನಸಹಾಯ, ಯೋಜನೆಗಳ ಹಣ, ವಿದೇಶಿ ದೇಣಿಗೆ, ಸಿಎಸ್ಆರ್ ನೆರವು ಹಾಗೂ ಕಾರ್ಪೊರೇಟ್ ಕಂಪನಿಗಳ ಪ್ರಾಯೋಜಕತ್ವ ನೆರವನ್ನು 'ಆಶಾ' ಪಡೆಯುವುದಿಲ್ಲ. 'ಆಶಾ ಕಿಸಾನ್ ಸ್ವರಾಜ್' ಕಾರ್ಯಕ್ರಮಗಳಿಗೆ ಸಾಧ್ಯವಾದಷ್ಟೂ ಸ್ವಂತ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗುತ್ತಿದೆ. ಅದೇ ಹೊತ್ತಿಗೆ, ಹಣಕಾಸಿನ ಸಾಮರ್ಥ್ಯವಿಲ್ಲದವರು ಕಾರ್ಯಕ್ರಮಕ್ಕೆ ಗೈರುಹಾಜರಾಗಬಾರದು ಎಂಬುದನ್ನು ಸಹ ಅತ್ಯಂತ ಕಾಳಜಿಯಿಂದ ನಿರ್ವಹಿಸಲಾಗುತ್ತದೆ.

ನೋಂದಣಿ ಶುಲ್ಕವು ಸಮಾವೇಶದ ಕಿಟ್, ಸರಳ ವಸತಿ ವ್ಯವಸ್ಥೆ, ದೇಶದ ವಿವಿಧ ರಾಜ್ಯಗಳ 9 ಬಗೆಯ ಸಾಂಪ್ರದಾಯಿಕ ಊಟೋಪಚಾರ, ಎಲ್ಲ ಕಾರ್ಯಕ್ರಮಗಳಿಗೆ ಹಾಜರಾಗಲು ಅವಕಾಶ, ಸಮಾನಾಂತರ ವೇದಿಕೆಯಲ್ಲಿನ ಉಪನ್ಯಾಸ, ಮೇಳ ಮತ್ತು ಕಾರ್ಯಾಗಾರಗಳಿಗೆ ಪ್ರವೇಶದ ಸೌಲಭ್ಯ ಕಲ್ಪಿಸುತ್ತದೆ. ಸಮ್ಮೇಳನಕ್ಕೆ ಹೋಗಿ– ಬರುವ ಪ್ರಯಾಣ ವೆಚ್ಚ ಮತ್ತು ಸಮ್ಮೇಳನದ ನಂತರ ಆಯೋಜಿಸುವ ಕೃಷಿ ಪ್ರವಾಸದ ಖರ್ಚು ಇದರಲ್ಲಿ ಸೇರಿಲ್ಲ.

ವರ್ಗಾವಾರು ವಿಭಾಗ		ನಿಗದಿತ ಅವಧಿಯೊಳಗೆ ನೋಂದಣಿ: (ಸೆಪ್ಟೆಂಬರ್ 30, 2022ರೊಳಗೆ)			ಗಡುವು ಮೀರಿದ ನಂತರದ ನೋಂದಣಿ: (1ನೇ ಅಕ್ಟೋಬರ್ ನಿಂದ 10ನೇ ಅಕ್ಟೋಬರ್ 2022)		
1	ವೇತನದಾರ, ನಗರವಾಸಿಗಳು,ಸಂಶೋಧಕರು ಹಾಗೂ ಅಧಿಕಾರಿಗಳು, ಸರ್ಕಾರಿ ನೌಕರರು	ನೋಂದಣಿ ಶುಲ್ಕ	ಜಿಎಸ್ಟಿ (18 %)	ಒಟ್ಟು ಶುಲ್ಕ	ನೋಂದಣಿ ಶುಲ್ಕ	ಜಿಎಸ್ಟಿ (18 %)	ಒಟ್ಟು ಶುಲ್ಕ
		2966.10	533.90	**3500**	3389.83	610.17	**4000**
2	ಕೃಷಿಯನ್ನು ಹೊರತುಪಡಿಸಿ ಇತರೇ ಆದಾಯ ಹೊಂದಿದ ರೈತರು, ಮಾಧ್ಯಮ ಪ್ರತಿನಿಧಿಗಳು, ಸಂಘಟನೆಗಳ ಪ್ರತಿನಿಧಿಗಳು, ರೈತ ಸಂಘಗಳ ಪ್ರತಿನಿಧಿಗಳು	2118.64	381.36	**2500**	2542.37	457.63	**3000**
3	ಕೃಷಿ ಹೊರತುಪಡಿಸಿ ಬೇರಾವ ಆದಾಯವೂ ಇಲ್ಲದ ರೈತರು/ವಿದ್ಯಾರ್ಥಿಗಳು	1271.19	228.81	**1500**	1694.91	305.09	**2000**
	ಮಹಿಳಾ ರೈತರು	677.97	122.03	**800**	847.46	152.54	**1000**

ಪ್ರತಿನಿಧಿಗಳಿಗೆ ಸೂಚನೆಗಳು

1. ಕರ್ನಾಟಕದಿಂದ ಭಾಗವಹಿಸುವ ಎಲ್ಲ – ಅದರಲ್ಲೂ ಕೃಷಿಯೇತರ– ಪ್ರತಿನಿಧಿಗಳಿಗೆ ತಮ್ಮ ವಸತಿಯ ವ್ಯವಸ್ಥೆಯನ್ನು ಸ್ವತಃ ಮಾಡಿಕೊಳ್ಳುವಂತೆ ಮನವಿ ಮಾಡುತ್ತೇವೆ. ಇದರಿಂದ, ಅಷ್ಟು ಸ್ಥಳಾವಕಾಶವನ್ನು ಇತರ ರಾಜ್ಯಗಳ ರೈತರು ಅಥವಾ ಪ್ರತಿನಿಧಿಗಳಿಗೆ ಕಲ್ಪಿಸಲು ಸಾಧ್ಯವಾಗಲಿದೆ. ತಮ್ಮ ವಸತಿ ವ್ಯವಸ್ಥೆಯನ್ನು ಸ್ವಯಂಪ್ರೇರಿತವಾಗಿ ಮಾಡಿಕೊಳ್ಳುವ ಪ್ರತಿನಿಧಿಗಳಿಗೆ ಶುಲ್ಕದಲ್ಲಿ ರಿಯಾಯತಿ ಇರುವುದಿಲ್ಲ.

2. ಪ್ರತಿನಿಧಿಗಳಿಗೆ ಅತ್ಯಂತ ಸರಳ ವಸತಿ ಹಾಗೂ ಸಾಮಾನ್ಯ ಸ್ನಾನಗೃಹ– ಶೌಚಾಲಯ ವ್ಯವಸ್ಥೆ ಇರಲಿದೆ. ಸುವ್ಯವಸ್ಥಿತ ಸೌಲಭ್ಯ ಬಯಸುವವರು ಸ್ವಂತ ವೆಚ್ಚದಲ್ಲಿ ಸಮೀಪದ ಹೋಟೆಲ್ ಆಯ್ಕೆ ಮಾಡಿಕೊಳ್ಳಬಹುದು. ಮೈಸೂರಿನ ಹೃದಯ ಭಾಗದಲ್ಲಿ ಸಮ್ಮೇಳನ ನಡೆಯಲಿದ್ದು, ಸಾಕಷ್ಟು ಹೋಟೆಲ್ಗಳು ಲಭ್ಯ. ಒಂದಷ್ಟು ಹೋಟೆಲ್ಗಳ ಪಟ್ಟಿಯನ್ನು www.kisanswaraj.in ಇಲ್ಲಿ ಕೊಡಲಾಗುವುದು. ಆದರೆ ಈ ಹೋಟೆಲ್ ದರದಲ್ಲಿ ಯಾವುದೇ ರಿಯಾಯತಿ ಇರುವುದಿಲ್ಲ.

3. ಒಂದೇ ರಾಜ್ಯದಿಂದ ಬರುವ ಪ್ರತಿನಿಧಿಗಳಿಗೆ ಭಾಷೆ– ಸಂವಹನ ತೊಡಕಾಗದಂತೆ ಒಂದೇ ಕಡೆ ವಸತಿ ವ್ಯವಸ್ಥೆ ಕಲ್ಪಿಸಲು ಪ್ರಯತ್ನಿಸಲಾಗುವುದು. ಆದರೆ ಇದು ಕಡ್ಡಾಯವೇನಲ್ಲ.



4. ವಸತಿ ಸೌಲಭ್ಯದ ಅವಧಿ: ಸಮ್ಮೇಳನದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಮೂರು ದಿನಗಳ ಕಾಲ ವಸತಿ ಹಾಗೂ ಊಟೋಪಚಾರದ ವ್ಯವಸ್ಥೆಯನ್ನು ಸಂಘಟಕರು ಪ್ರತಿನಿಧಿಗಳಿಗೆ (ಸ್ವಂತ ವೆಚ್ಚದಲ್ಲಿ ವಸತಿ ವ್ಯವಸ್ಥೆ ಮಾಡಿಕೊಂಡಿಲ್ಲದವರಿಗೆ) ಕಲ್ಪಿಸಲಿದ್ದಾರೆ. ಈ ಸೌಲಭ್ಯ ನವೆಂಬರ್ 10ರ ಸಂಜೆ 6 ಗಂಟೆಯಿಂದ ನವೆಂಬರ್ 13, 2022ರವರೆಗೆ ಇರಲಿದೆ. ಈ ಸೌಕರ್ಯ ಪಡೆದವರು ನವೆಂಬರ್ 13ರಂದು ಸಂಜೆ 6 ಗಂಟೆಯೊಳಗೆ ಅಲ್ಲಿಂದ ಹೊರಡಬೇಕಾಗುತ್ತದೆ. ಪ್ರಯಾಣ ತೀರಾ ತಡವಾಗಿದ್ದರೆ ಮತ್ತು ಅನಿವಾರ್ಯ ಸಂದರ್ಭದಲ್ಲಿ ಸಂಘಟಕರು ಆ ಬಗ್ಗೆ ಪ್ರತಿನಿಧಿಗಳಿಗೆ ವ್ಯವಸ್ಥೆ ಮಾಡಲು ಪ್ರಯತ್ನಿಸಲಿದ್ದಾರೆ. ಆದರೆ ಅದನ್ನು ಖಚಿತಪಡಿಸಲು ಆಗದು.

5. ವಾಹನಗಳ ಸಂಚಾರ: ಕಾರ್ ಅಥವಾ ಇತರ ವಾಹನಗಳಲ್ಲಿ ಬರುವ ಪ್ರತಿನಿಧಿಗಳು ಸಮ್ಮೇಳನದ ಸ್ಥಳಕ್ಕೆ ಬರಲು ಆದಷ್ಟೂ ಅದೇ ವಾಹನವನ್ನು ಬಳಸಿಕೊಳ್ಳಲು ಕೋರಲಾಗಿದೆ. ಸ್ವಂತ ವಾಹನ ವ್ಯವಸ್ಥೆ ಮಾಡಿಕೊಂಡು ಗುಂಪುಗಳಲ್ಲಿ ಬರುವವರು ಮೊದಲೇ ತಿಳಿಸಿದರೆ, ಒಂದೇ ಕಡೆಗೆ ವಸತಿ ವ್ಯವಸ್ಥೆ ಮಾಡಲು ಯತ್ನಿಸಲಾಗುವುದು.

6. ಭಾಷಾನುವಾದ: ಸಮ್ಮೇಳನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಭಾಷೆ ತೊಡಕಾಗಬಾರದು. ಇದಕ್ಕಾಗಿ ಪ್ರತಿನಿಧಿಗಳು, ಸಾಧ್ಯವಾದಷ್ಟೂ ತಮ್ಮ ಭಾಷೆಯಲ್ಲಿ ಅನುವಾದ ಮಾಡಿಕೊಳ್ಳುವ ವ್ಯವಸ್ಥೆ ರೂಪಿಸಿಕೊಳ್ಳಲು ಕೋರುತ್ತೇವೆ. ರಾಜ್ಯವಾರು ಚರ್ಚೆಗಳು ನಡೆದಾಗ ಈ ಸಮಸ್ಯೆ ಕಾಣದು. ಆದರೆ ಮುಖ್ಯ ವೇದಿಕೆಯಲ್ಲಿ ನಡೆಯುವ ಕಾರ್ಯಕ್ರಮಗಳ ಅನುವಾದವನ್ನು ಮಾಡಲು ಸಂಘಟಕರು ಪ್ರಯತ್ನ ಮಾಡಲಿದ್ದಾರೆ.

7. ಸಾವಯವ ಊಟೋಪಚಾರ: ವಿವಿಧ ರಾಜ್ಯಗಳಿಂದ ಬರುವ ಸಾವಯವ ಕೃಷಿಕರ ಗುಂಪುಗಳು ಸಾವಯವ ಆಹಾರ ಮಳಿಗೆಗಳನ್ನು ಸ್ಥಾಪಿಸಲಿದ್ದಾರೆ. ಸಮ್ಮೇಳನದ ಎಲ್ಲ ಪ್ರತಿನಿಧಿಗಳೂ ಯಾವುದೇ ಶುಲ್ಕವಿಲ್ಲದೇ ಮೂರು ದಿನಗಳ ಕಾಲ ವಿವಿಧ ರಾಜ್ಯಗಳ ಊಟೋಪಚಾರದ ರುಚಿ ಸವಿಯುವಂತೆ ವ್ಯವಸ್ಥೆ ರೂಪಿಸಲಾಗಿದೆ. ವೈವಿಧ್ಯಮಯ, ಸಾಂಪ್ರದಾಯಿಕ, ಬಹುಬಗೆಯ ಮತ್ತು ರುಚಿಕರ ಆಹಾರವನ್ನು ಪ್ರತಿನಿಧಿಗಳು ಸಂತಸದಿಂದ ಸವಿಯಬೇಕೆಂಬುದು ಸಂಘಟಕರ ಆಶಯ. ಇದು ಆಹಾರ ಸಂಸ್ಕೃತಿ ಮತ್ತು ರೈತರ ಉತ್ಪನ್ನಕ್ಕೆ ಉತ್ತೇಜನ ಕೊಡುವ ಪರಿಯೂ ಆಗಿದೆ. ಹೆಸರು ನೋಂದಾಯಿಸಿದ ಪ್ರತಿನಿಧಿಗಳು ತಮ್ಮ ಪ್ರಯಾಣದ ಟಿಕೆಟ್ ಅನ್ನು ಕಾಯ್ದಿರಿಸಿಕೊಳ್ಳಬಹುದು. ಅಕ್ಟೋಬರ್ 25, 2022ಕ್ಕೂ ಮೊದಲು ನೋಂದಾಯಿತ ಪ್ರತಿನಿಧಿಗಳಿಗೆ ಅಧಿಕೃತ ಪ್ರತಿನಿಧಿ ಪತ್ರವನ್ನು ರವಾನಿಸಲಾಗುತ್ತದೆ..

8. ತಾತ್ವಿಕವಾಗಿ, ಯಾವೊಬ್ಬ ರೈತನೂ ಶುಲ್ಕ ಪಾವತಿಸಲು ಸಾಧ್ಯವಾಗದೇ ಸಮ್ಮೇಳನದಲ್ಲಿ ಪಾಲ್ಗೊಳ್ಳುವುದರಿಂದ ಖಂಡಿತವಾಗಿಯೂ ದೂರ ಉಳಿಯಬಾರದು ಎಂಬ ಧೋರಣೆಯನ್ನು 'ಆಶಾ' ಬಲವಾಗಿ ಪ್ರತಿಪಾದಿಸಿ, ಅದರಂತೆಯೇ ನಡೆದುಕೊಳ್ಳಲಿದೆ.

ಪ್ರತಿನಿಧಿ ನೋಂದಾವಣೆ ಪ್ರಕ್ರಿಯೆ

ನೊಂದಾಯಿಸಲು ಸುಲಭ ವಿಧಾನವೆಂದರೆ ಕೆಳಗಿನ ಲಿಂಕ್ ಬಳಸಿ:

Payment link- https://rzp.io/l/indregkisanswarajsammelan
Registration Link- https://tinyurl.com/4stdzprt

–ಈ ಲಿಂಕ್ ಬಳಸಿ, ವಿವರಗಳನ್ನು ಭರ್ತಿ ಮಾಡಿದ ಬಳಿಕ ಶುಲ್ಕ ಪಾವತಿಸಿ.

ಆನ್ಲೈನ್ ಮೂಲಕ ನೋಂದಾಯಿಸಲು ಸಾಧ್ಯವಿಲ್ಲದವರು ಕೊನೆಗೆ ಇರುವ 'ವೈಯಕ್ತಿಕ ನೋಂದಣಿ' ಅರ್ಜಿಯನ್ನು ಭರ್ತಿ ಮಾಡಿ, ನಿಗದಿತ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್ ಅನ್ನು "Desi Seed Producer Company Limited" payable at Mysuru ಈ ಹೆಸರಿಗೆ ತೆಗೆದುಕೊಂಡು, ದೇಸಿ ಸೀಡ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್, ನಂ. 38, ಒಂದನೇ ಕ್ರಾಸ್, ಆದಿ ಪಂಪ ರಸ್ತೆ, ವಿವಿ ಮೊಹಲ್ಲ, ಮೈಸೂರು– 570002, ಕರ್ನಾಟಕ– ಇಲ್ಲಿಗೆ ಕೋರಿಯರ್/ ಅಂಚೆ ಮೂಲಕ ಕಳಿಸಬಹುದು.

- ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಗುಂಪು ರಚಿಸಿಕೊಂಡು ಸಮ್ಮೇಳನಕ್ಕೆ ಹಾಜರಾಗುವವರು, ಹೆಚ್ಚುವರಿಯಾಗಿ 'ಗುಂಪು ಪ್ರತಿನಿಧಿಗಳು ನೋಂದಣಿ' ಅರ್ಜಿಯನ್ನು ಭರ್ತಿ ಮಾಡಬೇಕು; ಅಲ್ಲಿಯೇ ಇರುವ ಲಿಂಕ್ ಬಳಸಿ ಶುಲ್ಕ ಪಾವತಿಸಬೇಕು.

ದಯವಿಟ್ಟು ಗಮನಿಸಿ: ನೋಂದಾಯಿಸುವ ಸಮಯದಲ್ಲಿ ಸಂಪೂರ್ಣ ವಿವರಗಳನ್ನು ಒದಗಿಸಿದರಷ್ಟೇ ವಸತಿ ಮತ್ತಿತರ ಸೌಲಭ್ಯ ಕಲ್ಪಿಸಲು ಸಂಘಟಕರಿಗೆ ಸಹಕಾರಿಯಾಗುತ್ತದೆ.

ಸಮ್ಮೇಳನದಲ್ಲಿ ಪ್ರದರ್ಶನಾ ಮಳಿಗೆಗಳು

ಸಾವಯವ ಕೃಷಿಕರು, ಕೃಷಿಕರ ಗುಂಪುಗಳು, ನೋಂದಾಯಿತ ಸ್ವಯಂಸೇವಾ ಸಂಸ್ಥೆಗಳು, ಉದ್ಯಮಿಗಳು ಹಾಗೂ ಅರೆಸರ್ಕಾರಿ ಇಲಾಖೆಗಳು ತಮ್ಮ ಚಟುವಟಿಕೆ, ಸಾವಯವ/ ನೈಸರ್ಗಿಕ ಕೃಷಿಯ ಯೋಜನೆಗಳು, ಸಂಸ್ಕರಣಾ ಘಟಕಗಳು, ಪ್ರಕಟಣಾ ಪುಸ್ತಿಕೆ ಹಾಗೂ ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ಮಳಿಗೆಗಳನ್ನು ಸ್ಥಾಪಿಸಲಾಗುವುದು. ಅಪ್ಪಟ ಸಾವಯವ ಕೃಷಿಕರು ಹಾಗೂ ಕಿರು ರೈತ ಉತ್ಪಾದಕ ಕಂಪನಿಗಳು ಉತ್ಪಾದಿಸಿ, ಮಾರಾಟ ಮಾಡುವ ಒಳಸುರಿಗಳ ಹೊರತಾಗಿ ಉಳಿದವುಗಳ ಮಾರಾಟಕ್ಕೆ ನಿರ್ಬಂಧವಿದೆ.





ವಿಭಾಗ		ಅವಧಿಗೂ ಮುನ್ನ ನೋಂದಣಿ: (ಸೆಪ್ಟೆಂಬರ್ 30, 2022ರವರೆಗೆ)			ನಿಗದಿತ ಅವಧಿ ಮೀರಿದ ಬಳಿಕ ನೋಂದಣಿ: (1ನೇ ಅಕ್ಟೋಬರ್‌ನಿಂದ 10ನೇ ಅಕ್ಟೋಬರ್, 2022ರವರೆಗೆ)		
1	ಖಾಸಗಿ ಉದ್ಯಮಿಗಳು ಅರೆ ಸರ್ಕಾರಿ, ಸರ್ಕಾರಿ ಇಲಾಖೆಗಳು	ನೋಂದಣಿ ಶುಲ್ಕ	ಜಿಎಸ್ಟಿ (18 %)	ಒಟ್ಟು ಮೊತ್ತ	ನೋಂದಣಿ ಶುಲ್ಕ	ಜಿಎಸ್ಟಿ (18 %)	ಒಟ್ಟು ಮೊತ್ತ
		12711.85	2288.15	**15000**	15254.24	2745.76	**18000**
2	12–ಎ ಪ್ರಮಾಣಪತ್ರ ಹೊಂದಿರುವ ಸ್ವಯಂಸೇವಾ ಸಂಸ್ಥೆಗಳು	8474.58	1525.42	**10000**	10169.49	1830.51	**12000**
3	ಕೃಷಿ ಹೊರತುಪಡಿಸಿ ಬೇರಾವ ಆದಾಯವೂ ಇಲ್ಲದ ರೈತರು/ವಿದ್ಯಾರ್ಥಿಗಳು	5084.74	915.26	**6000**	6355.93	1144.07	**7500**
	ಮಹಿಳಾ ರೈತರು	2542.37	457.63	**3000**	3389.83	610.17	**4000**

ಗಮನಿಸಬೇಕಾದ ಸಂಗತಿ:

ಭಾಗವಹಿಸುವವರು ಈ ಲಿಂಕ್ ಮೂಲಕ ಅರ್ಜಿಯನ್ನು ಸಲ್ಲಿಸಿ:
ನೊಂದಾಯಿಸಲು ಸುಲಭ ವಿಧಾನವೆಂದರೆ

Payment Link-
https://rzp.io/l/kisanswarajsammelanstallregist
Registration Link- https://tinyurl.com/yp3t6bnm

ದಾಖಲಾತಿಗಳು, ದರ ನಿಗದಿ ಮತ್ತು ಪದಾರ್ಥಗಳ ವಿಶ್ವಾಸಾರ್ಹತೆಯನ್ನು ಪರಿಶೀಲಿಸಿ ತಾಂತ್ರಿಕ ಸಮಿತಿಯು ಮಳಿಗೆ ವಿತರಿಸುವ ನಿರ್ಧಾರ ಕೈಗೊಳ್ಳುತ್ತದೆ. ಸಮಿತಿಯು ತೀರ್ಮಾನ ತೆಗೆದುಕೊಳ್ಳಲು ಅನುಕೂಲ ಆಗುವ ನಿಟ್ಟಿನಲ್ಲಿ ಅಗತ್ಯ ವಿವರ ಹಾಗೂ ಸ್ಯಾಂಪಲ್ ಗಳನ್ನು ಕಳಿಸಬೇಕು. ಯಾವುದೇ ಕಾರಣ ಕೊಡದೇ ಮಳಿಗೆಗೆ ಅವಕಾಶ ನೀಡದ ಹಕ್ಕು ಕೂಡ ಸಂಘಟಕರಲ್ಲಿ ಇರುತ್ತದೆ.

1. 1 ಮತ್ತು 2ನೇ ವಿಭಾಗಕ್ಕೆ ಪ್ರತಿ ಮಳಿಗೆಗೆ ಇಬ್ಬರು ಹಾಗೂ 3 ಮತ್ತು 4ನೇ ವಿಭಾಗಕ್ಕೆ ಪ್ರತಿ ಮಳಿಗೆಗೆ ಒಬ್ಬನನ್ನು ನಿಯೋಜಿಸಬಹುದು. ಅದಕ್ಕೆ ಅನುಸಾರವಾಗಿ ಟೇಬಲ್ ಒದಗಿಸಲಾಗುತ್ತದೆ.

2. 'ಕಿಸಾನ್ ಹಾತ್'ಗೆ ಟೇಬಲ್ ಸ್ಥಳಾವಕಾಶ ಒದಗಿಸಲಾಗುವುದು. ಉಳಿದವರಿಗೆ, 50ರಿಂದ 70 ಚದರ ಅಡಿ ವಿಸ್ತೀರ್ಣದ ಮಳಿಗೆ, ಎರಡು ಕುರ್ಚಿ, ಎರಡು ಟೇಬಲ್, ಟೇಬಲ್ ಕ್ಲಾತ್, ಒಂದು ವಿದ್ಯುದ್ದೀಪ ಹಾಗೂ ಒಂದು ಪ್ಲಗ್ ಪಾಯಿಂಟ್ ಒದಗಿಸಲಾಗುವುದು.

3. ಪ್ರದರ್ಶನಾ ಮಳಿಗೆ ಕಾಯ್ದಿರಿಸಲು ಈ ಕೆಳಗಿನ ಪ್ರಕ್ರಿಯೆ ಮೂಲಕ ನೋಂದಾಯಿಸಿ.

ಸಮ್ಮೇಳನ ಮತ್ತು ಪ್ರದರ್ಶನಾ ವಲಯದಲ್ಲಿ ಫ್ಲೆಕ್ಸ್ ಬ್ಯಾನರ್, ಥರ್ಮೊಕೋಲ್ ಹಾಗೂ ಪ್ಲಾಸ್ಟಿಕ್ ಬಳಕೆ (ಮೂಲ ಪ್ಯಾಕಿಂಗ್ ಹೊರತುಪಡಿಸಿ) ನಿಷೇಧಿಸಲಾಗಿದೆ. ಪರಿಸರವನ್ನು ಸ್ವಚ್ಛವಾಗಿಡಲು ಸಹಕರಿಸಲು ಕೋರಲಾಗಿದೆ.

ಪ್ರದರ್ಶನದಲ್ಲಿ ಮಳಿಗೆ ಅಥವಾ ಟೇಬಲ್

ಎ. ನೋಂದಾಯಿಸಲು ಸುಲಭ ವಿಧಾನವೆಂದರೆ

Payment Link-
https://rzp.io/l/kisanswarajsammelanstallregist
Registration Link- https://tinyurl.com/yp3t6bnm

ಈ ಲಿಂಕ್ ಬಳಸಿ, ವಿವರಗಳನ್ನು ಭರ್ತಿ ಮಾಡಿದ ಬಳಿಕ ಶುಲ್ಕ ಪಾವತಿಸಿ.
ಬಿ. ಆನ್‌ಲೈನ್ ಮೂಲಕ ನೋಂದಾಯಿಸಲು ಸಾಧ್ಯವಿಲ್ಲದವರು ಕೊನೆಗೆ ಇರುವ 'ಪ್ರದರ್ಶನಾ ಮಳಿಗೆಗೆ ನೋಂದಣಿ' ಅರ್ಜಿಯನ್ನು ಭರ್ತಿ ಮಾಡಿ, ನಿಗದಿತ ಶುಲ್ಕದ ಡಿಮ್ಯಾಂಡ್ ಡ್ರಾಫ್ಟ್ ಅನ್ನು "Desi Seed Producer Company Limited" payable at Mysuru ಈ ಹೆಸರಿಗೆ ತೆಗೆದುಕೊಂಡು, ದೇಸಿ ಸೀಡ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್, ನಂ. 38, ಒಂದನೇ ಕ್ರಾಸ್, ಆದಿ ಪಂಪ ರಸ್ತೆ, ವಿವಿ ಮೊಹಲ್ಲ, ಮೈಸೂರು– 570002, ಕರ್ನಾಟಕ– ಇಲ್ಲಿಗೆ ಕೋರಿಯರ್/ ಅಂಚೆ ಮೂಲಕ ಕಳಿಸಬಹುದು..

ಸಮ್ಮೇಳನದ ನಂತರದ ಕೃಷಿ ಪ್ರವಾಸಗಳು

ನೋಂದಣಿ ಅರ್ಜಿಯಲ್ಲಿ, ನಿಮ್ಮ ಆಸಕ್ತಿಗೆ ಅನುಗುಣವಾಗಿ 1 ಅಥವಾ 2 ದಿನಗಳ ಕೃಷಿ ಪ್ರವಾಸದ ಅವಕಾಶವನ್ನು ನಿಗದಿತ ಶುಲ್ಕದೊಂದಿಗೆ ಆಯ್ಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹೆಸರಾಂತ ಸಾವಯವ ಕೃಷಿಕರು, ಕೃಷಿ ವೈವಿಧ್ಯ ತಾಣಗಳು, ರೈತ ಉತ್ಪಾದಕ ಕಂಪನಿಗಳ ಪ್ರವಾಸವನ್ನು ಸಮ್ಮೇಳನ ಮುಕ್ತಾಯದ ನಂತರದಲ್ಲಿ ಆಯೋಜಿಸಲಾಗಿದೆ. ನಿಮ್ಮ ಮರುಪ್ರಯಾಣದ ಸಮಯವನ್ನು ಮೊದಲೇ ಅರಿತು, ಈ ಪ್ರವಾಸದ ಸೌಲಭ್ಯ ಸದುಪಯೋಗ ಮಾಡಿಕೊಳ್ಳಬಹುದು.

1. ಎರಡು ದಿನಗಳ ಪ್ರವಾಸ (ಎರಡು ಇಂಥ ಪ್ರವಾಸಗಳ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು) – ಕೇವಲ 30 ಜನರಿಗೆ ಅವಕಾಶವಿದೆ

- ಒಂದನೇ ಪ್ರವಾಸವು 2022ರ ನವೆಂಬರ್ 14ರಂದು ಬೆಳಿಗ್ಗೆ 8.30ಕ್ಕೆ ಆರಂಭವಾಗಿ ನವೆಂಬರ್ 15ರಂದು ಸಂಜೆ 5.30ಕ್ಕೆ ಮೈಸೂರು ರೈಲು ನಿಲ್ದಾಣದಲ್ಲಿ ಮುಕ್ತಾಯವಾಗಲಿದೆ.
- ಎರಡನೇ ಪ್ರವಾಸವು 2022ರ ನವೆಂಬರ್ 14ರಂದು ಬೆಳಿಗ್ಗೆ 8.30ಕ್ಕೆ ಆರಂಭವಾಗಿ ನವೆಂಬರ್ 15ರಂದು ಸಂಜೆ 5ಕ್ಕೆ ಬೆಂಗಳೂರು ರೈಲು ನಿಲ್ದಾಣದಲ್ಲಿ ಮುಕ್ತಾಯವಾಗಲಿದೆ.

2. 1 ದಿನದ ಪ್ರವಾಸಗಳು (ಎರಡು ಪ್ರವಾಸಗಳನ್ನು ಆಯೋಜಿಸಲಾಗಿದೆ):

ಎರಡೂ ಪ್ರವಾಸಗಳು 2022ರ ನವೆಂಬರ್ 14ರಂದು ಬೆಳಿಗ್ಗೆ 8.30ಕ್ಕೆ ಆರಂಭವಾಗಿ ಅವತ್ತೇ ಸಂಜೆ 5.30ಕ್ಕೆ ಮೈಸೂರು ರೈಲು ನಿಲ್ದಾಣದಲ್ಲಿ ಮುಕ್ತಾಯವಾಗುತ್ತವೆ. ಪ್ರತಿ ಪ್ರವಾಸದಲ್ಲಿ ಕೇವಲ 25 ಜನರಿಗೆ ಅವಕಾಶ ಇದೆ.

ಸಮ್ಮೇಳನದ ಬಳಿಕ ನಡೆಯುವ ಈ ಪ್ರವಾಸಗಳಿಗೆ ಶುಲ್ಕವನ್ನು ಮುಂಗಡ ಪಾವತಿ ಮಾಡಬೇಕು.



ಮೈಸೂರು ತಲುಪುವುದು ಹೇಗೆ?

ಬಸ್, ರೈಲು ಹಾಗೂ ವಿಮಾನಯಾನ ಮೂಲಕ ಮೈಸೂರನ್ನು ಸುಲಭವಾಗಿ ತಲುಪಬಹುದು. ಮೈಸೂರಿನಿಂದ ಬೆಂಗಳೂರು 140 ಕಿ.ಮೀ ದೂರದಲ್ಲಿದೆ.

ರೈಲು: ಕರ್ನಾಟಕದ ವಿವಿಧ ಭಾಗಗಳಿಂದ ಸೀಮಿತ ಸಂಖ್ಯೆಯ ರೈಲುಗಳು ಮೈಸೂರಿಗೆ ಇವೆ. ಬೆಂಗಳೂರಿಗೆ ಬಂದು, ಅಲ್ಲಿಂದ ಬಸ್ ಅಥವಾ ರೈಲಿನಲ್ಲಿ ಮೈಸೂರು ತಲುಪಬಹುದು.

ಬಸ್: ಕರ್ನಾಟಕದ ಪ್ರಮುಖ ನಗರಗಳಿಂದ ಮೈಸೂರಿಗೆ ಬಸ್ ಸಂಪರ್ಕವಿದೆ. ಹೆಚ್ಚಿನ ಮಾಹಿತಿಗೆ ಕೆಎಸ್ಆರ್‌ಟಿಸಿ ಜಾಲತಾಣದ ಮೂಲಕ ಹೆಚ್ಚಿನ ಮಾಹಿತಿ ಪಡೆಯಬಹುದು.

ವಿಮಾನ: ಸೀಮಿತ ಸಂಖ್ಯೆಯ ವಿಮಾನಗಳು ಮೈಸೂರಿಗೆ ಇವೆ. ಬೆಂಗಳೂರು ಮತ್ತು ಹುಬ್ಬಳ್ಳಿಯಿಂದ ನೇರ ವಿಮಾನ ಸೌಲಭ್ಯವಿದೆ. ಬೆಂಗಳೂರು ವಿಮಾನ ನಿಲ್ದಾಣದಿಂದ ಫ್ಲೈಬಸ್ ಮೂಲಕ ಮೈಸೂರು ತಲುಪಬಹುದು.

ಯಾವುದೇ ಮಾಹಿತಿಗೆ ದಯವಿಟ್ಟು asha.kisanswaraj@gmail.com ಇಲ್ಲಿಗೆ ಇ ಮೇಲ್ ಕಳಿಸಿ. ಅಥವಾ 'ಆಶಾ' ಕಾರ್ಯಕರ್ತರ ಮೊಬೈಲ್ ಸಂಪರ್ಕಿಸಿ: ಮೈಸೂರು ಸಂಪರ್ಕ ಸಂಖ್ಯೆ– 7090009911 ಅಥವಾ ಕೋಮಲ್ – 98809 08608

ನೋಂದಾಯಿತರಿಗೆ ಮಾತ್ರ ಸಮ್ಮೇಳನದಲ್ಲಿ ಪಾಲ್ಗೊಳ್ಳುವ ಅವಕಾಶ ಇರುವುದರಿಂದ, ವೆಬ್ ಸೈಟ್ ನಲ್ಲಿರುವ ಅರ್ಜಿ ಭರ್ತಿ ಮಾಡಿ, ಶುಲ್ಕ ಪಾವತಿಸಿ ಹೆಸರು ನೋಂದಾವಣೆ ಮಾಡಿಕೊಳ್ಳಲು ಕೋರಲಾಗಿದೆ.

ಆಶಾ– ಕಿಸಾನ್ ಸ್ವರಾಜ್ ಕುರಿತು

2010ರಲ್ಲಿ ಗಾಂಧಿ ಜಯಂತಿ ಅಂಗವಾಗಿ ಗುಜರಾತಿನ ಗಾಂಧಿ ವಿದ್ಯಾಪೀಠದಿಂದ ಆರಂಭವಾಗಿ ರಾಷ್ಟ್ರದುದ್ದಕ್ಕೂ 71 ದಿನಗಳ ಕಾಲ ನಡೆದ ಕಿಸಾನ್ ಸ್ವರಾಜ್ ಯಾತ್ರಾದ ಫಲಶ್ರುತಿಯಾಗಿ ಸುಸ್ಥಿರ ಮತ್ತು ಸಮಗ್ರ ಕೃಷಿ ಮೈತ್ರಿಕೂಟ 'ಆಶಾ– ಕಿಸಾನ್ ಸ್ವರಾಜ್' ಅಸ್ತಿತ್ವಕ್ಕೆ ಬಂದಿತು. ಶುದ್ಧ ಆಹಾರ, ಸಾರ್ವಭೌಮತ್ವದಂಥ ಮಹತ್ವದ ವಿಷಯಗಳ ಬಗ್ಗೆ ಚರ್ಚೆ ನಡೆಸುವ ಮೂಲಕ, ದೇಶದಾದ್ಯಂತ ಇರುವ ಕೃಷಿಪರ ಸಂಘಟನೆಗಳನ್ನು ಒಂದುಗೂಡಿಸಿ ಕಾರ್ಯನಿರ್ವಹಿಸುತ್ತಿದೆ. ಕೃಷಿ ವಿಧಾನಗಳು, ನೀತಿ ನಿರೂಪಣೆ ಪುನರ್ ಮೌಲ್ಯಮಾಪನ, ಆಹಾರ ವೈವಿಧ್ಯ, ಪೋಷಕಾಂಶ ಭದ್ರತೆ ಮೂಲಕ ಸುಸ್ಥಿರ ಕೃಷಿಯನ್ನು ಬಲಿಷ್ಠಗೊಳಿಸುವ ಸ್ವಯಂಪ್ರೇರಿತ ಆಂದೋಲನ ಇದಾಗಿದೆ. ವಿವಿಧ ಭಾಗಗಳ ಸಂಘಟನೆಗಳನ್ನು ಒಂದೇ ವೇದಿಕೆಗೆ ಕರೆತಂದು, ಪರಸ್ಪರ ವಿಶ್ವಾಸವೃದ್ಧಿಸಿ ಕೃಷಿ ಸಮುದಾಯದ ಏಳಿಗೆಗೆ 'ಆಶಾ' ಶ್ರಮಿಸುತ್ತಿದೆ.

ಪ್ರಮುಖವಾಗಿ 'ಆಶಾ– ಕಿಸಾನ್ ಸ್ವರಾಜ್' ನಾಲ್ಕು ಆಧಾರಸ್ತಂಭಗಳ ಮೂಲಕ ತನ್ನ ಕಾರ್ಯನಿರ್ವಹಣೆಯ ಚೌಕಟ್ಟನ್ನು ರೂಪಿಸಿಕೊಂಡಿದೆ. ಆ 'ಕಿಸಾನ್ ಸ್ವರಾಜ್ ನೀತಿ'ಯು ನಿರ್ಲಕ್ಷಿತ/ ಅಗೋಚರ/ ಸಣ್ಣ ರೈತರನ್ನು ಕೇಂದ್ರೀಕರಿಸಿ, ಕೃಷಿ ವಲಯಕ್ಕೊಂದು ಮುನ್ನೋಟ ರೂಪಿಸಿದೆ ಮತ್ತು ಸರ್ಕಾರಗಳು ಈ ನೀತಿಗಳನ್ನು ಅಳವಡಿಸಿಕೊಳ್ಳುವಂತೆ ಕರೆ ನೀಡಿದೆ.
ಆ ನೀತಿಗಳು:

1. ಎಲ್ಲ ಕೃಷಿ ಕುಟುಂಬಗಳೂ ಘನತೆಯುತ ಬದುಕನ್ನು ನಡೆಸಲು ಕನಿಷ್ಠ ಆದಾಯ ಭದ್ರತೆ ಕೊಡಬೇಕು
2. ಸುಸ್ಥಿರ ಕೃಷಿ ಜೀವನೋಪಾಯಕ್ಕಾಗಿ ಸಂಪನ್ಮೂಲಗಳ ಸುಸ್ಥಿರ ಬಳಕೆ ಮತ್ತು ಸಂರಕ್ಷಣೆ ಮೂಲಕ ಕೃಷಿ ಪರಿಸರವನ್ನು ಸಜ್ಜುಗೊಳಿಸುವುದು
3. ಭೂಮಿ, ನೀರು, ಅರಣ್ಯ ಮತ್ತು ಬೀಜದಂಥ ಕೃಷಿ ಸಂಪನ್ಮೂಲಗಳ ಮೇಲೆ ಜನಸಮುದಾಯದ ನಿಯಂತ್ರಣ
4. ಎಲ್ಲರಿಗೂ ಶುದ್ಧ, ಆರೋಗ್ಯಯುತ, ಪೌಷ್ಟಿಕಾಂಶಭರಿತ ಮತ್ತು ತೃಪ್ತಿಯಾಗುವಷ್ಟು ಆಹಾರ

ಪ್ರಸ್ತುತ 12ನೇ ವರ್ಷಕ್ಕೆ ಕಾಲಿಟ್ಟಿರುವ 'ಆಶಾ' ಆರ್ಥಿಕ, ಸಾಮಾಜಿಕ ಮತ್ತು ಪರಿಸರದ ದೃಷ್ಟಿಯಿಂದ ಕೃಷಿಯನ್ನು ಸಮಗ್ರವಾಗಿ ವ್ಯಾಖ್ಯಾನಿಸಿ ಬೇಸಾಯ ಮತ್ತು ರೈತನ ಕುರಿತು ನ್ಯಾಯಸಮ್ಮತ ನಿಲುವುಗಳನ್ನು ತಳೆಯುವಂತೆ ಪ್ರತಿಪಾದಿಸುತ್ತಿದೆ. ಇದರ ಜತೆಗೆ, ನಗರವಾಸಿ ಗ್ರಾಹಕರು ವ್ಯವಸಾಯದ ಬಗ್ಗೆ ಚಿಂತಿಸಿ, ಶುದ್ಧ ಆಹಾರದತ್ತ ಒಲವು ತೋರುವಂತೆ ಮಾಡಿದೆ. 'ಆಶಾ' ಜತೆಗೂಡಿರುವ ಪ್ರತಿಯೊಂದು ಸಂಘಟನೆಯೂ ತನ್ನಲ್ಲಿನ ವೈವಿಧ್ಯಮಯ ಕೌಶಲ, ಅನುಭವ ಹಾಗೂ ಸಿದ್ಧಾಂತಗಳನ್ನು ವಿನಿಮಯ ಮಾಡಿಕೊಳ್ಳುತ್ತಿದೆ.

ದಶಕದಿಂದ ಹೆಚ್ಚು ಕಾಲ 'ಆಶಾ' ವೇದಿಕೆ ಜತೆಗೆ ಒಡನಾಟ ಹೊಂದಿದ ಫಲಶ್ರುತಿಯಾಗಿ, ಈ ಮೈತ್ರಿಕೂಟದ ಸದಸ್ಯ ಸಂಘಟನೆಗಳ ಪ್ರತಿನಿಧಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿ ನಿರೂಪಣೆ ಸಂದರ್ಭದಲ್ಲಿ ಸಲಹೆಕಾರರಾಗಿ ಸೇವೆ ಸಲ್ಲಿಸುವಂತಾಗಿದೆ.

ಮೇಲ್ಮಟ್ಟದಲ್ಲಿ ಕಾಣಿಸಿದ ಸಾಧನೆಯಾದರೆ, ಕೃಷಿ ಮತ್ತು ಆಹಾರ ವ್ಯವಸ್ಥೆಗಳಲ್ಲಿ ಪರ್ಯಾಯ ವ್ಯವಸ್ಥೆಯನ್ನು ತಳಮಟ್ಟದಲ್ಲಿ ರೂಪಿಸುವ ಕೆಲಸವನ್ನು 'ಆಶಾ' ವೇದಿಕೆಯ ಸದಸ್ಯ ಸಂಘಟನೆಗಳು ನಿರ್ವಹಿಸುತ್ತಿವೆ. ಶ್ರೇಷ್ಠ ಜ್ಞಾನ ಮತ್ತು ಅಪೂರ್ವ ಅನುಭವಕ್ಕೆ 'ಆಶಾ' ಹೆಸರುವಾಸಿಯಾಗಿದೆ. ನೀತಿ ನಿರೂಪಣೆಯ ಮಟ್ಟದಲ್ಲಿ 'ಆಶಾ' ಸಂಘಟನೆಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ.

ಸಮ್ಮೇಳನದ ಧ್ಯೇಯೋದ್ದೇಶಗಳು

1. ರೈತ ಸಮುದಾಯದ ಮೇಲೆ ಪರಿಣಾಮ ಬೀರುವ ವಿವಿಧ ನೀತಿಗಳು ಹಾಗೂ ಅಭಿವೃದ್ಧಿ ವಿಷಯಗಳ ಕುರಿತು ಜ್ಞಾನ ವಿನಿಮಯ ವಿನಿಮಯ,ಗ್ರಹಿಕೆ ಹಾಗೂ ಮಾಹಿತಿಯನ್ನು ಸಂಪನ್ಮೂಲ ವ್ಯಕ್ತಿಗಳ ಜತೆಗಿನ ಸಂವಾದದ ಮೂಲಕ ಇತರರಿಗೆ ಒದಗಿಸುವುದು; ಅದೇ ರೀತಿ, ಪರಿಸರಸ್ನೇಹಿ ಬೇಸಾಯ ವಿಧಾನಗಳು, ಒಳಸುರಿಗಳು, ಸಾಧನ– ಸಲಕರಣೆ ಮತ್ತು ಮಾರುಕಟ್ಟೆ ಅವಕಾಶಗಳ ಕುರಿತಾದ ಜ್ಞಾನ ಮತ್ತು ಅನುಭವ ವಿನಿಮಯ
2. ಪ್ರತಿನಿಧಿಗಳ ಮಧ್ಯೆ ಸಂವಾದ; ಸಂವಹನ ಹಾಗೂ ಪ್ರಸ್ತುತ ನಡೆಯುತ್ತಿರುವ ಚಟುವಟಿಕೆಗಳ ಮಾಹಿತಿ ಹಂಚಿಕೆ
3. 'ಆಶಾ' ವೇದಿಕೆಯು ಕೈಗೆತ್ತಿಕೊಳ್ಳುವ ಅಭಿಯಾನಗಳ ಕುರಿತು ಸಮಾನಮನಸ್ಕ ಸಂಘಟನೆಗಳಲ್ಲಿ ಒಗ್ಗಟ್ಟು ಮೂಡಿಸುವುದು
4. ಪರಸ್ಪರ ಅನುಭವದಿಂದ ಕಲಿಕೆ, ಕಾರ್ಯತಂತ್ರ ರಚನೆ, ಅಗತ್ಯ ಇದ್ದಲ್ಲಿ ಮುಂದಿನ ಯೋಜನೆ ರೂಪಿಸುವುದು
5. ಸಮ್ಮೇಳನದಲ್ಲಿ ತಾರಸಿ ತೋಟ ಕಾರ್ಯಾಗಾರ, ಬೀಜ ಮೇಳ, ಸಾವಯವ ಆಹಾರ ಉತ್ಸವ, ಪ್ರದರ್ಶನ, ಚಿತ್ರ ಪ್ರದರ್ಶನ, ಸಾರ್ವಜನಿಕ ಉಪನ್ಯಾಸ, ಪುಸ್ತಕ ಪ್ರಕಟಣೆ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು
6. ಪರಿಸರ ಸ್ನೇಹಿ ಕೃಷಿ ಕುರಿತ ಹೊಸ ಹೊಸ ವೈಜ್ಞಾನಿಕ ಮಾಹಿತಿ ಒದಗಿಸುವುದು ಹಾಗೂ ವಿಜ್ಞಾನಿಗಳು ಮತ್ತು ನೀತಿ ನಿರೂಪಕರ ಗಮನ ಸೆಳೆಯಲು ಪರಿಸರಕೃಷಿಯಲ್ಲಿ ಇರುವ ಅವಕಾಶಗಳನ್ನು ಪ್ರತಿಬಿಂಬಿಸುವುದು
7. ಸರ್ಕಾರದ ಇಲಾಖೆಗಳು, ಸಮುದಾಯ ಸಂಘಟನೆಗಳು, ಸಾಮಾಜಿಕ ಉದ್ಯಮಗಳು ಅನುಸರಿಸುವ ವಿವಿಧ ನೀತಿಗಳನ್ನು ಪುನರ್ಪರಿಶೀಲಿಸಿ ಮುಂದಿನ ಕಾರ್ಯಯೋಜನೆಗೆ ಮಾರ್ಗದರ್ಶನ ಪಡೆಯುವುದು
8. ದೇಶದಲ್ಲಿ ನಡೆಯುತ್ತಿರುವ ಸಾವಯವ / ನೈಸರ್ಗಿಕ ಕೃಷಿಯ ಪ್ರಸ್ತುತ ಸ್ಥಿತಿಗತಿಯನ್ನು ಆಮೂಲಾಗ್ರವಾಗಿ ಪರಿಶೀಲಿಸುವುದು.